**1ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು**

**ಸಿ.ಸಿಃ 1088/2015**

| | | | |
|---|---|---|---|
| ಸಾಕ್ಷಿದಾರರ ಹೆಸರು | | ರವೀಂದ್ರ ಎನ್ . | ಪ್ರಾಸಾಃ 4 |
| ತಂದೆಯ/ಗಂಡನ ಹೆಸರು | | ನಂಜಯ್ಯ | ಚಾಸಾಃ 1 |
| ವಯಸ್ಸು | | 53 ವರ್ಷ | |
| ಕೆಲಸ | | ಪೋಲಿಸ್ ಇನ್ಸ್ ಪೆಕ್ಟರ್ | ಸಾ ಪ್ರ ಬೋ |
| ವಾಸ | | ಸಿ.ಐ.ಡಿ, ಬೆಂಗಳೂರು | ದಿಃ 27/02/2024 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ನಾನು ಬದನವಾಳು ಪೋಲಿಸ್ ಠಾಣೆಯಲ್ಲಿ 11.09.2013 ರಿಂದ 05.01.2015 ವರೆಗೂ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 29.06.2014 ರಂದು ಬದನವಾಳು ಠಾಣಾ ಸರಹದ್ದಿನ ಅಳಗಂಚಿ ಗ್ರಾಮದಲ್ಲಿರುವ ಬನ್ನಾರಿ ಅಮ್ಮನ ಸಕ್ಕರೆ ಕಾರ್ಖಾನೆಯಲ್ಲಿನ ಕಾರ್ಮಿಕರಾದ 1 ರಿಂದ 22 ನೇ ಆರೋಪಿತರು ಅವರನ್ನು ಕೆಲಸದಿಂದ ವಜಾ ಮಾಡಿದ್ದ ಕಾರಣ ಆರೋಪಿತರು ಮತ್ತು ಅವರ ಕುಟುಂಬಸ್ಥರು ಕಾರ್ಖಾನೆಯ ಮುಂಭಾಗ ಧರಣಿ ಮಾಡುತ್ತಿದ್ದ ಕಾರಣ ನಾನು, ಚಾಸಾ 12 ರಿಂದ 14 ಮತ್ತು ಇತರೆ ಸಿಬ್ಬಂದಿಗಳು ಕರ್ತವ್ಯದಲ್ಲಿ ಇದ್ದೆವು. ಯಂತ್ರಗಳು ಮತ್ತು ಕಚ್ಚಾ ಸಾಮಗ್ರಿಯನ್ನು ಒಳಗೊಂಡ ನಾಲ್ಕು ಲಾರಿಗಳು ಆಚೆ ಹೋಗಬೇಕಿದ್ದು, ಆರೋಪಿತರು ವಾಹನಗಳು ಹೊರಗೆ ಹೋಗದಂತೆ ತಡೆದು ಗಲಾಟೆ ಮಾಡುತ್ತಿದ್ದರು. ಈ ಸಂಬಂದ ಕಾರ್ಖಾನೆಯವರು ಬಂದೋಬಸ್ತ ನೀಡುವಂತೆ ನಮಗೆ ವರದಿ ಮಾಡಿಕೊಂಡಿದ್ದು, ಲಾರಿ ನಂ. ಕೆ.ಎ.-25-ಸಿ.2370 ಮತ್ತು ಅದರ ಚಾಲಕ ಸುರೇಶ, ಲಾರಿ ನಂ. ಎಂ.ಹೆಚ್.-06-ಎಸಿ-1264 ಮತ್ತು ಇದರ ಚಾಲಕ ಅಮೂಲ್, ಎಂ.ಹೆಚ್-06-ಎಕ್ಯೂ-6406 ಮತ್ತು ಇದರ ಚಾಲಕ ಸಂಭಾಜಿ ಮತ್ತು ಲಾರಿ ನಂ. ಎಂ.ಹೆಚ್-06-ಎಸಿ-8209 ಮತ್ತು ಇದರ ಚಾಲಕ ಗೋರಕನಾಥ ಇವರನ್ನು ಆಚೆ ಕಳುಹಿಸಲು ಹೋದಾಗ ಧರಣಿ ನಿರತ ಆರೋಪಿತರುಗಳು ವಾಹನಗಳನ್ನು ತಡೆಹಿಡಿದು ಕರ್ತವ್ಯ ನಿರತ ಪೊಲೀಸ್ ಸಿಬ್ಬಂಧಿಗಳಿಗೆ ಕರ್ತವ್ಯಕ್ಕೆ ಅಡ್ಡಿಪಡಿಸಿ ಬೋಳಿಮಕ್ಕಳೇ ಸೂಳೇಮಕ್ಕಳೇ ಎಂದು ಬೈದು ನೀವು ಕಾರ್ಖಾನೆಯವರಿಂದ

ಹಣ ಪಡೆದು ಅವರಿಗೆ ಬೆಂಬಲಿಸುತ್ತಿದ್ದಿರ ಎಂದು ಹೇಳಿ ಲಾರಿಗಳನ್ನು ಹೊರಗೆ ಬಿಡುವುದಿಲ್ಲ ನೀವು ಹೇಗೆ ತೆಗೆದುಕೊಂಡು ಹೋಗುತ್ತೀರಿ ಎಂದು ಹೇಳಿ ನಿಮ್ಮನ್ನು ಮತ್ತು ಲಾರಿಗಳನ್ನು ಸುಟ್ಟು ಹಾಕಿ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿರುತ್ತಾರೆ. ಆರೋಪಿತರುಗಳು ನಮ್ಮನ್ನು ಅಡ್ಡಗಟ್ಟಿ ಗಲಾಟೆ ಮಾಡಿರುತ್ತಾರೆ. ಆದಾಗ್ಯೂ ಆರೋಪಿತರಿಗೆ ಸಮಾಧಾನ ಪಡಿಸಿ ಅವರ ಮನವೊಲಿಸಿ ಲಾರಿಗಳನ್ನು ಆಚೆ ಕಳುಹಿಸಲಾಗುತ್ತದೆ. ಲಾರಿಗಳು ಆಚೆ ಹೋದ ನಂತರ ಆರೋಪಿತರುಗಳು ತಡೆದು ವಾಪಸ್ಸು ಬರದಿದ್ದರೆ ವಾಹನಗಳಿಗೆ ಬೆಂಕಿ ಹಾಕಿ ಸುಡುವುದಾಗಿ ಬೆದರಿಸಿ 4 ಲಾರಿಗಳಿಗೆ ತಲಾ ಇಬ್ಬರಂತೆ ಹತ್ತಿ ಕ್ಯಾಬಿನ್ ನಲ್ಲಿದ್ದ ಚಾಲಕರಿಗೆ ಕೈಗಳಿಂದ ಹೊಡೆದು ಹಲ್ಲೆ ಮಾಡಿ ಲಾರಿಗಳನ್ನು ವಾಪಸ್ಸ ತಿರುಗಿಸುವಂತೆ ಸೂಚಿಸಿರುತ್ತಾರೆ. ನಾವು ಕಾರ್ಮಿಕ ಮುಖಂಡರಿಗೆ ಕಾರ್ಖಾನೆಯ ಆಡಳಿತ ಮಂಡಳಿಯವರೊಂದಿಗೆ ಮಾತನಾಡಿ ಸಮಸ್ಯೆಗಳನ್ನು ಇತ್ಯರ್ಥ ಪಡಿಸಿಕೊಳ್ಳುವಂತೆ ಸೂಚಿಸಿದ್ದರು ಅವರು ನಮ್ಮ ಮಾತು ಕೇಳಿರುವುದಿಲ್ಲ. ಆರೋಪಿತರುಗಳು ನಾಲ್ಕು ಲಾರಿಗಳನ್ನು ಬಲವಂತವಾಗಿ ಕಾರ್ಖಾನೆಯ ಒಳಕ್ಕೆ ತಂದು ಡ್ರೈವರ್ ಗಳನ್ನು ಕ್ಯಾಬಿನಿನ ಒಳಗೆ ಕೂಡಿ ಹಾಕಿದ್ದರು. ಕೆಲವು ಆರೋಪಿತರು ಸೆಕ್ಯೂರಿಟಿ ಆಫೀಸಿಗೆ ನುಗ್ಗಿ ಸೆಕ್ಯೂರಿಟಿ ಗಾರ್ಡ್ ಚಾಸಾ 2 ರವರಿಗೆ ಚಪ್ಪಲಿಯಿಂದ ಹೊಡೆದಿರುತ್ತಾರೆ. ಆರೋಪಿತರು ಕಾನೂನು ಸುವ್ಯವಸ್ಥೆಗೆ ಅಡ್ಡಿ ಪಡಿಸಿ, ಅಕ್ರಮ ಕೂಟ ಕಟ್ಟಿಕೊಂಡು ಪ್ರತಿಭಟನೆ ಮಾಡಿ ಕರ್ತವ್ಯ ನಿರತ ಪೊಲೀಸ್ ಸಿಬ್ಬಂದಿ ಮತ್ತು ಸೆಕ್ಯೂರಿಟಿ ಸಿಬ್ಬಂದಿಗಳ ಕರ್ತವ್ಯಕ್ಕೆ ಅಡ್ಡಿ ಪಡಿಸಿರುತ್ತಾರೆ. ಆದ್ದರಿಂದ ಆರೋಪಿತರ ವಿರುದ್ದ ಸ್ವ-ಪಿರ್ಯಾದಿ ತಯಾರಿಸಿ ಚಾಸಾ 13 ರವರ ಮುಖೇನ ಠಾಣೆಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ದೂರಿನ ಆಧಾರದ ಮೇಲೆ ಚಾಸಾ 19 ರವರು ಆರೋಪಿತರ ವಿರುದ್ದ ಪ್ರಕರಣ ದಾಖಲಿಸಿರುತ್ತಾರೆ.

ಅದೇ ದಿನ ಬೆಳಿಗ್ಗೆ 11 ರಿಂದ 11.45 ರ ವರೆಗೆ ಪಂಚರಾದ ಚಾಸಾ 2 ರಿಂದ 4 ರವರ ಸಮಕ್ಷಮ ಸ್ಥಳ ಪಂಚನಾಮೆ ಜರುಗಿಸಿರುತ್ತೇನೆ. ಚಾಸಾ 2, 3, 5, 6, 7, 8 ರಿಂದ 18 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ದಿಃ18.08.2014 ರಂದು ಆರೋಪಿತರು ಮಾನ್ಯ ಜಿಲ್ಲಾ ನ್ಯಾಯಾಲಯದ ನಿರೀಕ್ಷಣಾ ಜಾಮೀನಿನೊಂದಿಗೆ ಹಾಜರಾದ ಮೇರೆಗೆ ಅವರುಗಳನ್ನು ದಸ್ತಗಿರಿ ಕ್ರಮ ಅನುಸರಿಸಿ ಠಾಣಾ ಜಾಮೀನಿನ ಮೇರೆಗೆ ಬಿಡುಗಡೆ ಮಾಡಿರುತ್ತೇನೆ. ನಮ್ಮ ಠಾಣೆಯ ಸ್ಟೇಷನ್ ಹೌಸ್ ಡೈರಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 20.12.2014 ರಂದು ನ್ಯಾಯಾಲಯಕ್ಕೆ ಆರೋಪಿತರ ವಿರುದ್ದ ದೋಷಾರೋಪಣ ಪಟ್ಟಿಯನ್ನು ನಿವೇದಿಸಿಕೊಂಡಿರುತ್ತೇನೆ.

ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. 7, 10 ಮತ್ತು 22 ನೇ ಆರೋಪಿತರು ನ್ಯಾಯಾಲಯದಲ್ಲಿ ಹಾಜರಿದ್ದು, ಉಳಿಕೆ ಆರೋಪಿತರು ಗೈರುಹಾಜರಿರುತ್ತಾರೆ. ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರನ್ನು ನೋಡಿ ಗುರುತಿಸಿದ್ದು, ಗೈರುಹಾಜರಿರುವ ಆರೋಪಿತರು ಗುರುತಿಸುವಿಕೆಯ ಬಗ್ಗೆ ತಕರಾರು ಇರುವುದಿಲ್ಲವೆಂದು ಆರೋಪಿ ಪರ ವಕೀಲರು ನುಡಿದಿರುತ್ತಾರೆ.

ಈಗ ನನಗೆ ತೋರಿಸಿದ ದಾಖಲೆಯು ಸ್ವ ಪಿರ್ಯಾದು ಆಗಿದ್ದು ಅದರಲ್ಲಿ ನನ್ನ ರುಜು ಇರುತ್ತದೆ. ಸ್ವ ಪಿರ್ಯಾದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿ ಸಿದ ದಾಖಲೆಯು ಸ್ಥಳ ಪಂಚನಾಮೆ ಆಗಿದ್ದು ಅದರಲ್ಲಿ ನನ್ನ ರುಜು ಇರುತ್ತದೆ. ಸ್ಥಳ ಪಂಚನಾಮೆಯನ್ನು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಸಿ) ಎಂದು ಗುರುತಿಸಲಾಯಿತು. ಈಗ ನನಗೆ ತೋರಿಸಿದ ದಾಖಲೆಯು ಸ್ಟೇಷನ್ ಹೌಸ್ ಡೈರಿಯ ದೃಡಿಕೃತ ನಕಲಾಗಿದ್ದು, ಸದರಿ ದಾಖಲೆಯನ್ನು ನಿಪಿ-5 ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದು, ನೀಡಲಾಯಿತು.**

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಓ**

ಸಹಿ/-

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**